ಶ್ರೀ ಟಿ. ಚನ್ನಯ್ಯ.—ಅದನ್ನು Director of Public Instruction ಕೂಡ ಪರಿಶೀಲನೆ ಮಾಡುತ್ತಿದ್ದಾರೆ. ಅವರು ಈ ವಿಷಯದಲ್ಲಿ ಎಷ್ಟು ಹಣ ಕೊಡಬೇಕೆಂಬುದನ್ನು ಸರ್ಕಾರಕ್ಕೆ ಶಿಫಾರ್ಸು ಮಾಡಬೇಕು. ಅವರಿಂದ ಇನ್ನೂ ವರದಿ ಬಂದಿಲ್ಲ.

ಶ್ರೀ ಯು. ಎಂ. ಮಾವಪ್ಪ.—ಇನ್ನೂ ಎಷ್ಟು ವರುಷ ಆಗುತ್ತದೆ?

ಶ್ರೀ ಟಿ. ಚನ್ನಯ್ಯ.—ವರ್ಷಗಳು ಬೇಕಿಲ್ಲ. ಈ ಸಾಲಿನಲ್ಲಿ ಇದನ್ನು ತೆಗೆದುಕೊಂಡು ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಯು. ಎಂ. ಮಾದಪ್ಪ.—ಇದೇ ರೀತಿಯಾಗಿ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಬೇಕಾದಷ್ಟು ಗ್ರಾಮಸ್ಥರು ಗ್ರಾಮಪಂಚಾಯಿತಿಯಿಂದ ದುಡ್ಡು ಕೊಟ್ಟಿದ್ದಾರೆ ಅಲ್ಲವೇ?

Mr. SPEAKER.—With regard to other places, you need not ask.

ಶ್ರೀ ಬಿ. ರಾಚಯ್ಯ.—ಮೈಸೂರು ಡಿಸ್ಟ್ರಿಕ್ಟು ಬೋರ್ಡಿನವರು ವಿದ್ಯಾಇಲಾಖೆಯ ಕಟ್ಟಡಗಳನ್ನು ಕಟ್ಟಿಸುತ್ತಿದ್ದಾರೆ. ಈ ಕಟ್ಟಡಗಳಿಗೆ ಕೊಡಬೇಕಾಗಿರುವ ತಕ್ಕ ಹಣವನ್ನು ಪೂರ್ತಿಯಾಗಿ ಡಿಸ್ಟ್ರಿಕ್ಟು ಬೋರ್ಡಿಗೆ ಕೊಟ್ಟಿದ್ದಾರೆಯೇ?

ಶ್ರೀ ಟಿ. ಚನ್ನಯ್ಯ.—ಕೆಲವು ಬಾಕಿ ಕೊಟ್ಟಿಲ್ಲ.

ಶ್ರೀ ಬಿ. ರಾಚಯ್ಯ.—ಸುಮಾರು ಎಷ್ಟು ಲಕ್ಷ ರೂಪಾಯಿಗಳನ್ನು ಡಿಸ್ಟ್ರಿಕ್ಟು ಬೋರ್ಡಿನವರು ಕೊಡಬೇಕು?

ಶ್ರೀ ಟಿ. ಚನ್ನಯ್ಯ.—ಅದು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಬಿ. ರಾಚಯ್ಯ.—ಬಾಕಿ ಕೊಡದೇ ಇರುವುದರಿಂದ ಕೆಲಸಕಾರ್ಯಗಳು ನಿಂತುಹೋಗಿವೆ ಎಂಬುದು ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ಬಾಕಿ ಬರಬೇಕಾಗಿರುವುದು ಇದೆ. ಆದರೆ ಈಗ Education Department ಎಷ್ಟು ಹಣ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ವಿಷಯವನ್ನು ಕೇಳಿದ್ದೇವೆ. ಅವರು ಇನ್ನೂ ಸರ್ಕಾರಕ್ಕೆ ಆ ರಿಪೋರ್ಟನ್ನು ಕಳುಹಿಸಿಲ್ಲ.

ಶ್ರೀ ಬಿ. ರಾಚಯ್ಯ.—ತಾವು ಈಗ ತಾನೆ ಹೇಳಿದಿರಿ ಡೊನೇಷ್ಟ್ ಕೊಟ್ಟಿರತಕ್ಕಂಥ ಕೆಲಸ ಮಾತ್ರ ನಡೆದಿದೆ district board quota ಮತ್ತು ಸರ್ಕಾರಿ quota ಕೊಟ್ಟಿಲ್ಲ ಎಂದು ಕೊಡುವುದರಲ್ಲಿ ಏನು ಅಭ್ಯಂತರವಿದೆ?

ಶ್ರೀ ಟಿ. ಚನ್ನಯ್ಯ.—ಯಾವ ಫಂಡಿನಿಂದ meet ಮಾಡಬೇಕು ಎಂದು Education Department ನವರು ತಿಳಿಸಿಲ್ಲ. ಅದನ್ನು ತಿಳಿಸಿದ ನಂತರ ಆ ಕೆಲಸವನ್ನು ತೆಗೆದುಕೊಳ್ಳಲಾಗುತ್ತದೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಪ್ರೈಮರಿ ಶಾಲೆಗಳನ್ನು ಕಟ್ಟಿಸತಕ್ಕ ಕೆಲಸ ಡಿಸ್ಟ್ರಿಕ್ಟ್ ಬೋರ್ಡಿನವರದೇ ಅಥವಾ ಸರ್ಕಾರದ್ದೇ?

ಶ್ರೀ ಟಿ. ಚನ್ನಯ್ಯ.—ಸಾಮಾನ್ಯವಾಗಿ ಡಿಸ್ಟ್ರಿಕ್ಟ್ ಬೋರ್ಡಿನವರು Rural development ಕೆಲಸಗಳನ್ನು ಮಾಡುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಇದಕ್ಕೆ ಫಂಡನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕೊಡುತ್ತಾರೆಯೇ ಅಥವಾ ಸರ್ಕಾರದ ಜನರಲ್ ಫಂಡಿನಿಂದ ಕೊಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ರೂರಲ್ ಡೆವಲಪ್‌ಮೆಂಟ್ ಫಂಡಿನಿಂದ ಕೊಡುತ್ತಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರು ಏಜೆನ್ಸಿ ಮಾತ್ರವಲ್ಲವೇ?

ಶ್ರೀ ಟಿ. ಚನ್ನಯ್ಯ.—ಹೌದು; ಅವರೇ ಕೆಲಸ ಮಾಡುವವರು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಡಿಸ್ಟ್ರಿಕ್ಟ್ ಬೋರ್ಡಿನವರು ಭರ್ತೀ ಏಜೆನ್ಸಿಯೆಂದಾದಮೇಲೆ ಸ್ಕೂಲನ್ನು ಕಟ್ಟಿಸುವುದಕ್ಕೆ ಸರ್ಕಾರದ ಮಂಜೂರಾತಿಯಿಲ್ಲದೆ ಕಟ್ಟಬಹುದೇ! ಈ ಸ್ಕೂಲನ್ನು ಕಟ್ಟಿಸುವುದಕ್ಕೆ ಸರ್ಕಾರದವರು ಅವಕಾಶಕೊಟ್ಟರೇ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿನವರು ಕೆಲಸವನ್ನು ತೆಗೆದುಕೊಳ್ಳಬೇಕೆಂದು ಮಾಡಿದ್ದಾರೆ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಸರ್ಕಾರದ approval ಇಲ್ಲದೆ ಬಿಲ್ಡಿಂಗನ್ನು ಡಿಸ್ಟ್ರಿಕ್ಟ್ ಬೋರ್ಡಿನವರು ಕಟ್ಟಲಕ್ಕೆ ಅವಕಾಶ ಕೊಟ್ಟರೇ?

ಶ್ರೀ ಟಿ. ಚನ್ನಯ್ಯ.—ಸರ್ಕಾರದ approval ತೆಗೆದುಕೊಂಡಿಲ್ಲ. ಆದರೆ, ಇಷ್ಟು ಅಂದಾಜಾಗುತ್ತದೆಂದು ಹೇಳಿ ಸ್ಕೂಲನ್ನು ಕಟ್ಟುವುದಕ್ಕೆ ಒಂದು ಅಂದಾಜು ಮಾಡುತ್ತಾರೆ. ಆದರಲ್ಲಿ ಎಜುಕೇಷ್ಟ್ ಡಿಪಾರ್ಟ್‌ಮೆಂಟಿನವರು ಎಷ್ಟು ಕೊಡಬೇಕಾಗುತ್ತದೆ, ಡಿಸ್ಟ್ರಿಕ್ಟ್ ಬೋರ್ಡಿನವರು ಎಷ್ಟು ಕೊಡಬೇಕಾಗುತ್ತದೆ, local contribution ಎಷ್ಟು ಕೊಡಬೇಕಾಗುತ್ತದೆ ಎಂದು ತೀರ್ಮಾನಮಾಡಿಕೊಂಡು ಮಂಜೂರಾತಿ ಕೊಡಲಾಗುವುದು.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ಡೊನೇಷ್ಟ್ ಮೊಬಲಗಿನ ಕೆಲಸ ಆಗಲೇ ಪೂರ್ತಿಯಾಗಿ ಸರ್ಕಾರದವರು ಮಾಡಬೇಕಾದ ಕೆಲಸ ಮಾತ್ರ ನಿಂತು ಹೋಗಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಚನ್ನಯ್ಯ.—ಇಲ್ಲ.

ಶ್ರೀ ಎಚ್. ಕೆ. ಶಿವರುದ್ರಪ್ಪ.—ಈಗ ಅರ್ಧ ಕೆಲಸ ಆಗಿರುವುದು ಹಾಗೆಯೇ ಇರಬೇಕೆಂತಲೇ ಅಥವಾ ಸರ್ಕಾರದವರು ಅದನ್ನು ಪೂರ್ತಿ ಮಾಡುತ್ತಾರೆಯೇ?

ಶ್ರೀ ಟಿ. ಚನ್ನಯ್ಯ.—ಎಜುಕೇಷ್ಟ್ ಇಲಾಖೆಯವರು ಯಾವ source ನಿಂದ ಕೊಡಬೇಕೆಂದು ಸರ್ಕಾರಕ್ಕೆ ತಿಳಿಸಿದರೆ ಸರ್ಕಾರದವರು ಪರಿಶೀಲಿಸುತ್ತಾರೆ.

Tumkur District Board (Expenditure.)

Q.—515. Sri T. N. MUDALAGIRI GOWDA (Kunigal).—

Will the Government be pleased to state:—

(*a*) the amount spent in Tumkur District Board after it came under the administration of the Special Officer up to 31st January 1955 (the amount spent for establishment and the amount spent for works);

(*b*) the amount spent over works, the amount spent on each Taluk (Road repairs and Bridge repairs, etc.)?

A.—Sri T. CHANNIAH (Minister for Public Health and Local Self-Government).—

(*a*) Rs. 17,732-2-3, on Establishment.

Rs. 1,29,525-9-0 on Works.

(*b*) Please see annexure below.

Statement showing the talukwar details of amounts spent over works after the Board came under the administration of the Special Officer up to 31st January 1955.

TUMKUR DISTRICT BOARD.

Taluk	New road formations and improvements	New buildings and improvements	Bridges, Tunnels and causeways	Repairs to buildings	Annual repairs of roads	Special repairs of roads	Water Wells	Primary School buildings	High School buildings	Local Development works	Total
	Rs. a.	Rs. a.	Rs. a.	Rs. a.	Rs. a.	Rs. a.	Rs. a.	Rs. a.	Rs. a.	Rs. a.	Rs. a.
Tumkur ...	9,425-0	...	...	82- 8	4,261- 9	...	...	...	8,754-15	2,373-11	24,897-11
Kunigal ...	3,771-13	19- 8	9,253- 3	...	4,556- 0	2,396- 4	...	607-13	...	2,165- 1	22,769-10
Gubbi ...	832-10	...	1,686-15	101- 2	1,821- 9	162- 0	...	...	...	1,356- 8	5,960-12
Thuruvekere ...	1,390-10	1,862- 5	4,676- 6	...	3,960- 9	1,001- 7	2,273- 2	...	...	703-10	15,868- 1
Tiptur ...	1,943-15	...	...	...	2,644-12	...	...	...	...	238- 0	4,826-11
Chiknaikanahalli.	5,823-11	...	281- 4	...	3,063-13	662- 5	...	...	...	2,358-13	12,189-14
Sira ...	4,630-15	...	2,107- 0	...	3,701- 2	...	...	...	...	9,547-10	19,986-11
Madhugiri ...	3,105-11	...	1,790- 5	17- 1	6,401- 5	2,139-11	...	2,437- 2	...	2,297- 5	18,188- 8
Pavagada ...	...	...	...	153-13	161- 5	2,206- 0	...	...	...	...	2,521- 2
Koratagere ...	...	850- 0	...	168-11	798- 9	499- 5	...	...	...	...	2,316- 9
Total ...	30,924- 5	2,731-13	19,795- 1	523- 3	31,370- 9	9,067- 0	2,273- 2	3,044-15	8,754-15	21,040-10	1,29,525- 9

ಶ್ರೀ ಟಿ. ಎಚ್. ಮೂಡಲಗಿರಿಗೌಡ.—1954-55 ನೆಯ ಸಾಲಿನ ತುಮಕೂರು ಡಿಸ್ಟ್ರಿಕ್ಟ್ ಬೋರ್ಡಿನ Receipts ಮತ್ತು Expenditure ಏನು ?

ಶ್ರೀ ಟಿ. ಚನ್ನಯ್ಯ.—ಆ ಸ್ಟೇಟ್‌ಮೆಂಟ್ ಈಗ ನನ್ನಲ್ಲಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಇಲ್ಲಿ 1,29,525-9-0 ನ್ನು ಖರ್ಚುಮಾಡಿದೆಯೆಂದು ಹೇಳಿದ್ದೀರಿ. ಹಣ ಬಹಳ ಕಡಮೆ ಖರ್ಚಾಗಿದೆ, ಕೆಲಸ ಬಹಳ ಕಡಮೆ ಆಗಿದೆಯೆಂದರೆ ಒಪ್ಪುತ್ತೀರಾ ?

Sri T. CHANNIAH.—It is a matter of opinion.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಇನ್ನೂ ಎಷ್ಟು ಹಣ ಡಿಸ್ಟ್ರಿಕ್ಟ್ ಬೋರ್ಡಿನವರಲ್ಲಿ ಉಳಿದಿದೆ ?

Sri T. CHANNIAH.—Notice.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಡಿಸ್ಟ್ರಿಕ್ಟ್ ಬೋರ್ಡಿಗೆ ಸರ್ಕಾರದಿಂದ ಬರಬೇಕಾದ ಬಾಕಿ ಇನ್ನೂ ಹೇರಳವಾಗಿದೆ; ನುಮಾರು 3 ಲಕ್ಷ ರೂಪಾಯಿಗಳ ವರೆಗೂ ಡಿಸ್ಟ್ರಿಕ್ಟ್ ಬೋರ್ಡಿಗೆ ಕೊಡಬೇಕಾಗುತ್ತದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಡಿಸ್ಟ್ರಿಕ್ಟ್ ಬೋರ್ಡಿಗೆ ಬರಬೇಕಾದ ಹಣ ಇಷ್ಟು ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅಂತೂ ಹೆಲ್ತ್ ಡಿಪಾರ್ಟ್‌ಮೆಂಟ್‌ನಿಂದ ಮತ್ತು ಎಜುಕೇಷನ್ ಡಿಪಾರ್ಟ್‌ಮೆಂಟಿನಿಂದ ಈ ಡಿಸ್ಟ್ರಿಕ್ಟ್ ಬೋರ್ಡಿಗೆ ಸ್ವಲ್ಪ ಹಣ ಸಲ್ಲಬೇಕಾಗಿದೆ. ಇಷ್ಟೇ ಹಣ ಬರಬೇಕೆಂಬುದಾಗಿ ಈಗ ಖಚಿತವಾಗಿ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಬಹಳ ದಿವಸದಿಂದ ಬಹಳವಾದ ಹಣ ಸರ್ಕಾರದಲ್ಲಿ ನಿಂತಿದೆಯೆಂದರೆ ಒಪ್ಪುತ್ತೀರಾ ? ನುಮಾರು ಎರಡು ವರ್ಷಗಳಿಂದ ನಿಂತಿದೆಯಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಏಕೆ ಹೀಗೆ ನಿಲ್ಲಿಸಿಕೊಂಡಿದ್ದೀರಿ ? ಡಿಸ್ಟ್ರಿಕ್ಟ್ ಬೋರ್ಡಿನವರ ಕೆಲಸಕಾರ್ಯಗಳನ್ನು ನಿಲ್ಲಿಸಬೇಕೆಂದು ಮಾಡಿದ್ದೀರಾ ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರು ಆಗಲೇ ಸೂಚನೆ ಇತ್ತಿದ್ದಾರೆ. ಆಯಾ ಡಿಪಾರ್ಟ್‌ಮೆಂಟಿನವರು ಕೊಡಬೇಕಾದ ಮೊಬಲಗುಗಳನ್ನು ಡಿಸ್ಟ್ರಿಕ್ಟ್ ಬೋರ್ಡಿಗೆ ಜಮಾ ಮಾಡತಕ್ಕದೆಂದು ಹೇಳಿದ್ದೇವೆ. ಇನ್ನೂ ಅವರಿಂದ ಯಾವ ಉತ್ತರವೂ ಬಂದಿಲ್ಲ. ಕೊಡಬೇಕಾದ ಹಣವನ್ನು ಬೇಗ ಕೊಡುವ ಹಾಗೆ instructions ಕೊಟ್ಟಿದ್ದೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಹಾಗಾದರೆ ಎಷ್ಟು ಕೊಡಬೇಕೋ ಅದನ್ನು ಜಾಗ್ರತೆ ಕೊಡಬೇಕೆಂಬುದಾಗಿ move ಮಾಡುವುದಕ್ಕಾಗುವುದಿಲ್ಲವೇ?

Sri T. CHANNIAH.—That is not. . . .

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನಲ್ಲಿ ನೀತುವೆಗಳು ಏನೂ ಆಗಿಲ್ಲವೆಂದು ಹೇಳಿದ್ದೀರಿ. Channels ಮತ್ತು Bridges ಕೆಲಸ ಯಾವುದೂ ಆಗಿಲ್ಲವೇ ?

ಶ್ರೀ ಟಿ. ಚನ್ನಯ್ಯ.—ಈ ವರ್ಷ ಯಾವುದನ್ನೂ ತೆಗೆದುಕೊಂಡಿಲ್ಲವೆಂದು ಕಾಣುತ್ತದೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ತೆಗೆದುಕೊಳ್ಳದಿರುವುದಕ್ಕೆ ಕಾರಣವೇನು ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆಯಿಲ್ಲವೆಂದು ಬಹುಶಃ ಈ ವರ್ಷ ಬಿಡಲಾಗಿದೆ. ಅವಶ್ಯಕವಿದೆಯೆಂದು ಹೇಳಿದರೆ ಮುಂದಿನ ವರ್ಷ ನೋಡೋಣ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಅವಶ್ಯಕತೆಯಿದೆಯೆಂದು ವರದಿಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಇನ್ನೂ ಬರುತ್ತಿದೆ; ತೆಗೆದುಕೊಳ್ಳುತ್ತೇವೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ.—ಈ ಬಗ್ಗೆ ಜಾಗ್ರತೆ ಸೂಚನೆ ಕೊಡುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಕೊಡುತ್ತೇವೆ.

Rural water Supply in Chitaldrug District.

Q—.272. Sri G. DUGGAPPA (Holalkere—Scheduled Castes).—

Will the Government be pleased to state :—

(*a*) the amount that has been spent on rural water supply in Chitaldrug District during 1953-54 and 1954-55 ;

(*b*) the amount that was made available for this purpose ;

(*c*) the amount lapsed ?

A.—Sri T. CHANNIAH (Minister for Public Health and Local Self-Government).—

	1953-54			*1954-55*		
	Rs.	a.	p.	Rs.	a.	p.
(*a*) (1) Out of "40-A. Rural Development" grants.	20,000	0	0	7,359	8	0
(2) Land Revenue assignment ...	9,728	2	0	48,153	2	0
(*b*) (1) Out of "40-A. Rural Development" grants.	20,000	0	0	1,00,000	0	0
(2) Land Revenue assignment ...	1,80,332	9	0	...		
(*c*)	Nil			Nil.		